**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 26-02-2026:**

**ಮುಂದುವರೆದ  ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

3.ನಾನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ವಸ್ತುಸಂಖ್ಯೆ 3ನ್ನು ಈಗ ನೋಡುತ್ತಿದ್ದು ಎಂ.ಒ.1 ಎಂದು ಈಗಾಗಲೇ ಗುರುತಿಸಿರುತ್ತದೆ. ವಸ್ತುಸಂಖ್ಯೆ 6 ಈಗಾಗಲೇ ಎಂ.ಒ.2 ಎಂದು, ವಸ್ತುಸಂಖ್ಯೆ 9 ಈಗಾಗಲೇ ಎಂ.ಒ.3 ಎಂದು, ವಸ್ತುಸಂಖ್ಯೆ11ನ್ನು ಎಂ.ಒ.4 ಎಂದು ಗುರುತಿಸಲ್ಪಟ್ಟಿರುತ್ತದೆ.

4.ವಸ್ತುಸಂಖ್ಯೆ 1ನ್ನು ನೋಡುತ್ತಿದ್ದು ಅದನ್ನು ಎಂ.ಒ.5 ಎಂದು ಗುರುತಿಸಲಾಯಿತು. ವಸ್ತುಸಂಖ್ಯೆ 2ನ್ನು ನೋಡುತ್ತಿದ್ದು ಎಂಒ.6 ಎಂದು ಗುರುತಿಸಲಾಯಿತು. ವಸ್ತುಸಂಖ್ಯೆ 5ನ್ನು ನೋಡುತ್ತಿದ್ದು ಎಂ.ಒ.7 ಎಂದು ಗುರುತಿಸಲಾಯಿತು. ವಸ್ತುಸಂಖ್ಯೆ 7ನ್ನು ನೋಡುತ್ತಿದ್ದು ಎಂ.ಒ.8 ಎಂದು ಗುರುತಿಸಲಾಯಿತು. ವಸ್ತುಸಂಖ್ಯೆ 8ನ್ನು ಎಂ.ಒ.9 ಎಂದು ಗುರುತಿಸಲಾಯಿತುತು. ವಸ್ತುಸಂಖ್ಯೆ 10ನ್ನು ನೋಡುತ್ತಿದ್ದು ಎಂ.ಒ.10 ಎಂದು ಗುರುತಿಸಲಾಯಿತು. ವಸ್ತುಸಂಖ್ಯೆ 12 ನ್ನು ನೋಡುತ್ತಿದ್ದು ಎಂ.ಒ.11 ಎಂದು, ಗುರುತಿಸಲಾಯಿತು.

**ಪಾಟೀಸವಾಲುಃ  2ನೇ ಆರೋಪಿ  ಪರ ಶ್ರೀ ಹೆಚ್ ಎಲ್ ಡಿ  ವಕೀಲರಿಂದಃ**

ಫಿನಾಫ್ತಲಿನ್ ಲೇಪಿತ ನೋಟನ್ನು ನನಗೆ ಕೊಟ್ಟರೆ ಅದರಲ್ಲಿ ಫಿನಾಫ್ತಲಿನ್ ಅಂಶ ಇದೆಯೋ ಇಲ್ಲವೋ ಎಂದು ಪರೀಕ್ಷಿಸಬಹುದು. ಹಾಗೆಯೇ ಆ ಲೇಪಿತ ನೋಟುಗಳನ್ನು ಜೇಬಿನಲ್ಲಿಟ್ಟುಕೊಂಡಲ್ಲಿ ಆ ಬಟ್ಟೆಯನ್ನು ಕಳುಹಿಸಿದಲ್ಲಿ ಅದರಲ್ಲೂ ಆ ಅಂಶ ಇದೆಯೋ ಇಲ್ಲವೋ ಎಂದು ಪರೀಕ್ಷಿಸಬಹುದು.

2.ನಮಗೆ ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆಯ ಪ್ರತಿಗಳನ್ನು ಕಳುಹಿಸಿರುತ್ತಾರೆ. ಈ ವಿಚಾರವನ್ನು ನನ್ನ ವರದಿಯಲ್ಲಿ ಬರೆದಿಲ್ಲ ಎಂದರೆ ಸರಿ. ತನಿಖದಾಧಿಕಾರಿ ಏನು ವರದಿ ಕೇಳುತ್ತಾರೋ ಅದರಂತೆ ವರದಿ ಕೊಡುತ್ತೇವೆ ಎನ್ನುವುದು ಸರಿ. ಪೊಲೀಸರ ಹೇಳಿಕೆ ಮೇರೆಗೆ ನಾವು ವರದಿ ಕೊಟ್ಟಿರುವುದು ಎಂದರೆ ಸಾಕ್ಷಿಯು ಅವರು ಕಳುಹಿಸಿದ ವಸ್ತುಗಳಲ್ಲಿ ಫಿನಾಫ್ತಲಿನ್ ಮತ್ತು

ಸೋಡಿಯಂ ಕಾರ್ಬೊನೇಟ್ ಅಂಶ ಇದೆಯೋ ಇಲ್ಲವೋ ಎಂದು ಪರೀಕ್ಷಿಸಿ ವರದಿ ನೀಡಬೇಕೆಂದು ಕೇಳಿದ್ದರು, ಅದರಂತೆ ಕೊಟ್ಟಿದ್ದೇನೆ ಎನ್ನುತ್ತಾರೆ.

**ಪಾಟೀಸವಾಲುಃ 1ನೇ ಆರೋಪಿ ಪರ ವಕೀಲರಿಂದಃ**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**